# ವಿಘ್ನೇಶ್

## ನಿಗೂಢ ಸ್ಪಿನ್ನರ್!




**ಕೇರಳದ ಆಟೊ ಚಾಲಕರ ಮಗ ವಿಘ್ನೇಶ್ ಇದೀಗ ಮುಂಬೈ ಇಂಡಿಯನ್ಸ್ ಐಪಿಎಲ್ ತಂಡದಲ್ಲಿ ಉತ್ಸಾಹದ ಬುಗ್ಗೆಯಂತೆ ಕಾಣುತ್ತಿದ್ದಾರೆ. ಇಪ್ಪತ್ತನಾಲ್ಕು ವರ್ಷ ವಯಸ್ಸಿನ ಅವರು ಹೇಳಿಕೊಳ್ಳುವಂತಹ ಪ್ರಥಮ ದರ್ಜೆ ಕ್ರಿಕೆಟ್ ಪಂದ್ಯಗಳನ್ನು ಆಡದೇ ಇದ್ದರೂ ಚುಟುಕು ಕ್ರಿಕೆಟ್‌ನ ಮೆಕ್ಕಾದ ಒಳಗೆ ಪ್ರವೇಶಿಸಿದ್ದಾರೆ.**

**■ ವಿಶಾಖ ಎನ್.**

ಕೇರಳದ ಮಲಪ್ಪುರಂ ಫುಟ್‌ಬಾಲ್ ಆಟಕ್ಕೆ ಹೆಸರುವಾಸಿ. ದಶಕದ ಹಿಂದೆಯಷ್ಟೆ ಅಲ್ಲಿ ಕ್ರಿಕೆಟ್ ಮೋಹಕ್ಕೆ ಬಿದ್ದವರು ಬೆರಳೆಣಿಕೆಯಷ್ಟು ಇದ್ದರು. ಅಂತಹ ಪ್ರದೇಶದ ಊರೊಂದರಲ್ಲಿ ವಿಘ್ನೇಶ್ ಪುತ್ತೂರ್ ಎಂಬ ಹುಡುಗ ಹುಟ್ಟಿದ್ದು. 'ಮುಂಬೈ ಇಂಡಿಯನ್ಸ್' ಪರವಾಗಿ 'ಚೆನ್ನೈ ಸೂಪರ್ ಕಿಂಗ್ಸ್' ತಂಡದ ಎದುರು ನಡೆದ ಈ ಋತುವಿನ ಮೊದಲ ಪಂದ್ಯದಲ್ಲೇ ಈ ಹುಡುಗ ತನ್ನ ಕರಾಮತ್ತು ತೋರಿದ್ದು ವಿಶೇಷ.

ಪೆರಿಂಥಲ್ಮನ್ನ ಎಂಬ ಊರು. ಅಲ್ಲಿ ಸುನಿಲ್ ಎಂಬ ಒಬ್ಬರು ಆಟೊ ಓಡಿಸುತ್ತಾರೆ. ಅವರ ಮಗನೇ ವಿಘ್ನೇಶ್. ಸುನಿಲ್ ಅವರಿಗೆ ಫುಟ್‌ಬಾಲ್ ಹುಚ್ಚು ಇತ್ತು. ಮಗ ಕ್ರಿಕೆಟ್ ಆಟದ ರುಚಿ ಹತ್ತಿಸಿಕೊಂಡಾಗ ಅವರು ಚಕಿತಗೊಂಡರೂ ಬೆನ್ನುತಟ್ಟಿದರು. ಕ್ರಮೇಣ ಅದು ದುಬಾರಿ ಬಾಬತ್ತು ಆಗತೊಡಗಿತು. ಹಾಗಿದ್ದೂ ಅವರು ಮಗನ ಆಟದ ಪ್ರೀತಿಗೆ ನೀರೆರೆಯುವುದನ್ನು ಬಿಡಲಿಲ್ಲ. ಮೊನ್ನೆ ಚೆನ್ನೈನ ಚೆಪಾಕ್ ಕ್ರೀಡಾಂಗಣದಲ್ಲಿ ಮಗ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಆಡುವ ಅವಕಾಶ ಪಡೆದಾಗ, ಅವರ ಕಣ್ಣಾಲಿಗಳು ತುಂಬಿಕೊಂಡಿದ್ದವು.

ವಿಘ್ನೇಶ್ ತನ್ನ ವಾರಗೆಯ ಕ್ರಿಕೆಟಿಗರ ಪೈಕಿ, ಕೇರಳದಲ್ಲಿ ಇದ್ದ ಏಕೈಕ ಎಡಗೈ ಸ್ಪಿನ್ನರ್. ಆದರೆ, 19 ವರ್ಷದ ಒಳಗಿನವರ ರಾಜ್ಯ ತಂಡಕ್ಕೆ ಆಯ್ಕೆ ಆಗುವಲ್ಲಿ ವಿಫಲನಾಗಿದ್ದ. ಉಳಿದವರು ಕೌಶಲದಲ್ಲಿ ಹಿಂದಿಕ್ಕಿದ್ದನ್ನು ನಮ್ರತೆಯಿಂದ ಒಪ್ಪಿಕೊಂಡಿದ್ದ. 14 ಜಿಲ್ಲೆಗಳಿರುವ ರಾಜ್ಯದಲ್ಲಿ ಒಬ್ಬನೇ ಎಡಗೈ ಸ್ಪಿನ್ನರ್ ಇದ್ದರೂ ರಾಜ್ಯ ತಂಡಕ್ಕೆ ಆಯ್ಕೆಯಾಗಿರಲಿಲ್ಲ. ಅದರಿಂದ ಕಂಗಾಲಾಗಿ ಕೂರದೆ, ತನ್ನನ್ನು ತಾನು ತಿದ್ದಿಕೊಳ್ಳಲು ಮುಂದಾದ. ಅದು ಈಗ ಫಲ ಕೊಟ್ಟಿದೆ.

ಯಾವುದೇ ಮಾದರಿಯ ರಾಷ್ಟ್ರಮಟ್ಟದ ಕ್ರಿಕೆಟ್ ಆಡದೆಯೂ ಐಪಿಎಲ್‌ಗೆ ತೂರಿಬಂದದ್ದು ಈ ಹೊತ್ತಿನ ಗಮನಾರ್ಹ ಬೆಳವಣಿಗೆಗಳಲ್ಲಿ ಒಂದು. ಅಜಿಂಕ್ಯ ರಹಾನೆ ಅವರಂತಹ ಪಳಗಿದ ಕ್ರಿಕೆಟರ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಪ್ರವೇಶ ಪಡೆಯುವ ಮೊದಲು ಎಷ್ಟು ನೀರು ಕುಡಿದಿದ್ದಾರೆ ಎನ್ನುವ ಉದಾಹರಣೆ ನಮ್ಮ ಕಣ್ಣೆದುರು ಇದೆ.